# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ, ತುಮಕೂರು-572 103☏ :0816- 2255650, 2273511 ಫ್ಯಾಕ್ಸ್:0816-2270719

ಸಂಖ್ಯೆ:ತುವಿ: ಪ.ವಿ:ವಿ.ನಿ. 05-2022-23:/351

ದಿನಾಂಕ: 16.11.2022

## ಸುತ್ತೋಲೆ

**ವಿಷಯ:** ವಿವಿಧ ಪರೀಕ್ಷಾ ಕಾರ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಭತ್ಯೆಗಳನ್ನು ಪರಿಷ್ಕರಿಸಿರುವ ಕುರಿತು.

**ಉಲ್ಲೇಖ:** 1. ಏಳನೇ ಸಾಮಾನ್ಯ ಸಿಂಡಿಕೇಟ್ ಸಭೆಯ ಅನುಮೋದನೆಯ ದಿನಾಂಕ: 27.10.2022

2. ಮಾನ್ಯ ಕುಲಪತಿಯವರ ಅನುಮೋದನೆಯ ದಿನಾಂಕ: 16.11.2022

* * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷಾ ಕಾರ್ಯ ನಿರ್ವಹಿಸುವ ಬೋಧಕ ಮತ್ತು ಬೋದಕೇತರ ಹಾಗೂ ಪ್ರಯೋಗಾಲಯ ಸಿಬ್ಬಂದಿಯವರ ಭತ್ಯೆಗಳನ್ನು ಪರಿಷ್ಕರಿಸಿದ್ದು, ಸದರಿ ಪರಿಷ್ಕರಿಸಿದ ಭತ್ಯೆಗಳು 2022-23 ನೇ ಸಾಲಿನ ಸೆಪ್ಟೆಂಬರ್/ಅಕ್ಟೋಬರ್ ಮಾಹೆಗಳಲ್ಲಿ CBCS ಪದ್ಧತಿಯಲ್ಲಿ ನಡೆದ ದ್ವಿತೀಯ (ಪೂರಕ), ನಾಲ್ಕನೇ ಮತ್ತು ಆರನೇ ಸೆಮಿಸ್ಟರ್‌ಗಳ ಪರೀಕ್ಷೆಗಳಿಗೆ ಸಂಬಂಧಿಸಿದ ಪರೀಕ್ಷಾ ಕಾರ್ಯಗಳಿಂದ ಅನ್ವಯವಾಗುವುದು ಎಂಬುದನ್ನು ಈ ಮೂಲಕ ತಿಳಿಸಲಾಗಿದೆ. ಪರಿಷ್ಕರಿಸಿದ ಭತ್ಯೆಗಳ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ.

ಆದೇಶದ ಮೇರೆಗೆ,

16/11/22

ಕುಲಸಚಿವರು(ಪರೀಕ್ಷಾಂಗ)

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ

ಗೆ

1. ಪ್ರಾಂಶುಪಾಲರುಗಳು, ಘಟಕ ಕಾಲೇಜುಗಳು ಮತ್ತು ಸಂಯೋಜಿತ ವಿವಿಧ ಸ್ನಾತಕ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2. ಪ್ರಾಂಶುಪಾಲರುಗಳು/ನಿರ್ದೇಶಕರುಗಳು/ಮುಖ್ಯಸ್ಥರುಗಳು, ಸ್ನಾತಕೋತ್ತರ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

**ಪ್ರತಿಗಳು:**

1. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕಛೇರಿ ಪ್ರತಿ.

To
System Analyst, Computer Section, Tumkur University
to upload to the website

30.11.2022

Deputy Registrar
(Evaluation)
Tumkur University
Tumakuru-572103

ಅನುಬಂಧ-01

**ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಗಳಲ್ಲಿ ಕಾರ್ಯ ನಿರ್ವಹಿಸುವ ಅಧ್ಯಾಪಕ ವರ್ಗದವರು ವಿಶ್ವವಿದ್ಯಾನಿಲಯವು ನಿಗಧಿಪಡಿಸಿರುವ ದಿನಭತ್ಯೆ/ಸಂಭಾವನೆ ಭತ್ಯೆ ಹಾಗೂ ಕಾರ್ಯಭಾರದ ವಿವರಗಳು**

- ಅಧ್ಯಾಪಕರುಗಳು ಕಡ್ಡಾಯವಾಗಿ ಮೌಲ್ಯಮಾಪನ ಕೇಂದ್ರದಲ್ಲಿ ನೋಂದಣಿ ಮಾಡಿಕೊಳ್ಳುವುದು.
- ಪ್ರಶ್ನೆ ಪತ್ರಿಕೆ ತಯಾರಿಕೆ (Question Paper Setting) ಒಂದು ಪ್ರತಿಗೆ ರೂ. 200-00 ಕನ್ನಡ ತರ್ಜುಮೆಗೆ (Kannada Translation) ರೂ. 75-00 ಗಳನ್ನು **ಹೊರಗಿನ ಅಧ್ಯಾಪಕರಿಗೆ ಮಾತ್ರ ನೀಡಲಾಗುವುದು**
- ಮೊದಲ ಬಿಲ್ಲಿನಲ್ಲಿ ಮೊಬೈಲ್ ಸಂಖ್ಯೆ ಮತ್ತು ತಮ್ಮ ಬ್ಯಾಂಕಿನ ಖಾತೆ ಸಂಖ್ಯೆ ಹಾಗೂ ಐ.ಎಫ್.ಎಸ್.ಸಿ. ಕೋಡ್‌ನ್ನು ನಮೂದಿಸತಕ್ಕದ್ದು.
- **ಮೌಲ್ಯಮಾಪನ ಕಾರ್ಯವು ಬೆಳಗ್ಗೆ 9:30 ರಿಂದ 5:30 ರವರೆಗೆ ನಿರ್ವಹಿಸುವುದು.**
- **ಬೆಳಗ್ಗೆ 10:30 ರೊಳಗೆ ಒಂದು ಪ್ಯಾಕೆಟ್ ಉತ್ತರ ಪತ್ರಿಕೆಗಳನ್ನು ನೀಡತಕ್ಕದು. ಮಧ್ಯಾಹ್ನ 1:00 ಗಂಟೆಯ ನಂತರ ಎರಡನೇ ಪ್ಯಾಕೆಟ್ ಉತ್ತರ ಪತ್ರಿಕೆಗಳನ್ನು ನೀಡತಕ್ಕದ್ದು**
- ವಿಭಾಗದ ಪರಿಶೀಲಕರು (Reviewers) ಕಡ್ಡಾಯವಾಗಿ 15 ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವುದು. ನಿಗಧಿತ ಸಂಖ್ಯೆಯ ಉತ್ತರ ಪುಸ್ತಕಗಳನ್ನು ಬೆಳಗ್ಗೆ ಮತ್ತು ಮಧ್ಯಾಹ್ನದ ಅವಧಿಯಲ್ಲಿ ಮೌಲ್ಯಮಾಪನ ಮಾಡುವುದು.
- ಮೌಲ್ಯಮಾಪಕರು ಮೊದಲ ದಿನ 01 ಪ್ಯಾಕೆಟ್ ಮೌಲ್ಯಮಾಪನ ಮಾತ್ರ ಮಾಡುವುದು.

  ನಂತರ ಪ್ರತಿ ದಿನಕ್ಕೆ ನಿಗಧಿತ ಸಂಖ್ಯೆಯ ಉತ್ತರ ಪತ್ರಿಕೆಯನ್ನು ಮೌಲ್ಯಮಾಪನ ಮಾಡಬೇಕು. ಸಿ.ಬಿ.ಸಿ.ಎಸ್. ಸ್ಕೀಮ್ ಪ್ರತಿ ದಿನಕ್ಕೆ 30 ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಬೇಕಾಗುತ್ತದೆ ಮತ್ತು ಎನ್.ಇ.ಪಿ. ಪ್ರಕಾರ ಬೆಳಗ್ಗೆ 20 ಮತ್ತು ಮಧ್ಯಾಹ್ನದ ಅವದಿಗೆ 20 ಉತ್ತರ ಪತ್ರಿಕೆಗಳಂತೆ ದಿನವೊಂದಕ್ಕೆ ಒಟ್ಟು 40 ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಬೇಕಾಗುತ್ತದೆ.
- ಮೌಲ್ಯಮಾಪನ ಮಾಡಿದ ಉತ್ತರ ಪತ್ರಿಕೆಗಳನ್ನು ಆಯಾಯ ವಿಷಯಕ್ಕೆ ಸಂಬಂಧಪಟ್ಟ ಪರಿಶೀಲಕರಿಗೆ ನೀಡತಕ್ಕದ್ದು.
- **ಮೌಲ್ಯಮಾಪನ ಪೂರ್ಣಗೊಂಡ ನಂತರ ಮಾರ್ಕ್ಸ್ ಲಿಸ್ಟ್‌ಗಳನ್ನು ಗಣಕಯಂತ್ರ ವಿಭಾಗದಲ್ಲಿ ನಮೂದಿಸಲು ನೀಡಿ, ತದನಂತರ ಮುದ್ರಿಸಿ ನೀಡಲ್ಪಟ್ಟ ಮಾರ್ಕ್ಸ್ ಲಿಸ್ಟ್‌ಗಳನ್ನು ಮೌಲ್ಯಮಾಪಕರು ಮತ್ತು ಪರಿಶೀಲಕರು ಪುನರ್ ಪರಿಶೀಲಿಸಿ ಸಹಿ ಮಾಡತಕ್ಕದ್ದು.**
- ಮೌಲ್ಯಮಾಪಕರ ಸಂಖ್ಯೆಗಳಿಗನುಗುಣವಾಗಿ ಎಲ್ಲಾ ಮೌಲ್ಯಮಾಪಕರುಗಳಿಗೂ ಸಮನಾಗಿ ಉತ್ತರ ಪತ್ರಿಕೆಗಳನ್ನು ವಿತರಿಸುವುದು. ಕೊನೆಯ ಮೌಲ್ಯಮಾಪಕರಿಗೆ ಮಾತ್ರ ಉಳಿಕೆ ಉತ್ತರ ಪತ್ರಿಕೆಗಳನ್ನು ನೀಡುವುದು.
- ಮರುಮೌಲ್ಯಮಾಪನ ಹಾಗೂ ಮೂರನೇ ಮೌಲ್ಯಮಾಪನ ಕಾರ್ಯಗಳಲ್ಲಿ ಮಂಡಳಿ ಅಧ್ಯಕ್ಷರು ಪ್ರಶ್ನೆ ಪತ್ರಿಕೆ ಕೋಡ್ ಬೇರೆಬೇರೆಯಾಗಿದ್ದರೂ ಕೂಡ ಆಯಾ ವಿಷಯಕ್ಕೆ ಸಂಬಂಧಿಸಿದ ಅಧ್ಯಾಪಕರಿಂದ ಕನಿಷ್ಠ ಹತ್ತು ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿಸಿದರೆ ಮಾತ್ರ ಒಂದು ದಿನ ಭತ್ಯೆಯನ್ನು ನೀಡಲಾಗುವುದು.

16/11

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ

- ಸ್ಥಳೀಯ ಕಾಲೇಜುಗಳ ಅಧ್ಯಾಪಕರುಗಳಿಗೆ ದಿನ ಒಂದಕ್ಕೆ ರೂ. 650-00 ದಿನ ಭತ್ಯೆ ನೀಡುತ್ತಿದ್ದು, ರೂ. 800-00 ಕ್ಕೆ ಹೆಚ್ಚಿಸಲಾಗಿದೆ.
- ಹೊರಗಿನ ಕಾಲೇಜುಗಳ ಅಧ್ಯಾಪಕರುಗಳಿಗೆ ದಿನ ಒಂದಕ್ಕೆ ರೂ.800-00 ದಿನ ಭತ್ಯೆ ನೀಡುತ್ತಿದ್ದು, ರೂ. 950-00 ಕ್ಕೆ ಹೆಚ್ಚಿಸಲಾಗಿದೆ.
- ಯು.ಜಿ.ಸಿ. ವೇತನ ರಹಿತ ಅಧ್ಯಾಪಕರುಗಳಿಗೆ ಮತ್ತು ಅನ್ಯ ವಿಶ್ವವಿದ್ಯಾನಿಲಯಗಳಿಂದ ಬರುವ ಅಧ್ಯಾಪಕರುಗಳಿಗೆ ಒಂದು ಉತ್ತರ ಪತ್ರಿಕೆಗೆ ಸಿ.ಬಿ.ಸಿ.ಎಸ್. ಸ್ಕೀಮ್‌ಗೆ ರೂ.20-00 ಮತ್ತು ಎನ್.ಇ.ಪಿ. ಸ್ಕೀಮ್‌ಗೆ ರೂ.15-00 ಹಾಗೂ 1½ ಗಂಟೆಯ 40 ಅಂಕಗಳ ಒಂದು ಉತ್ತರ ಪತ್ರಿಕೆಯ ಮೌಲ್ಯಮಾಪನಕ್ಕೆ ರೂ.9-00 ಸಂಭಾವನೆ ನೀಡಲಾಗುವುದು. 10 ಉತ್ತರ ಪತ್ರಿಕೆಗಳಿಗಿಂತ ಕಡಿಮೆ ಇರುವ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ರೂ. 200-00 ರಂತೆ ಸಂಭಾವನೆ ನೀಡಲಾಗುವುದು.
- ಸಾರಿಗೆ ದರಪಟ್ಟಿಯಲ್ಲಿರುವ ಪ್ರಸ್ತುತ ದರವನ್ನೇ ಕಡ್ಡಾಯವಾಗಿ ನಮೂದಿಸುವುದು.
- ಸ್ನಾತಕ ಪದವಿ ಪರೀಕ್ಷೆಗಳ ಮೌಲ್ಯಮಾಪಕರುಗಳಿಗೆ ರೈಲ್ವೆ ಪ್ರಯಾಣ ಭತ್ಯೆ ನೀಡಲಾಗುವುದಿಲ್ಲ.
- ಪರೀಕ್ಷಾ ಮಂಡಳಿ ಅಧ್ಯಕ್ಷರಿಗೆ (BOE, Chairman Honorarium) ರೂ 300-00 ನೀಡಲಾಗುವುದು. (ಪ್ರಶ್ನೆ ಪತ್ರಿಕೆ ಬಿಲ್ಲಿನಲ್ಲಿ ಛೇರ್ಮನ್ ಫೀಜನ್ನು ಸಲ್ಲಿಸತಕ್ಕದ್ದು (Paper Setting). ಮೌಲ್ಯಮಾಪನ ಬಿಲ್ಲಿನಲ್ಲಿ ಛೇರ್ಮನ್ ಫೀಜನ್ನು ನೀಡಲಾಗುವುದಿಲ್ಲ).
- ವಿಭಾಗದ ಮುಖ್ಯಸ್ಥರಿಗೆ (Chief Examiner Honorarium) ರೂ 200-00 ನೀಡಲಾಗುವುದು.
- ವಿಭಾಗದ ಪರಿಶೀಲಕರಿಗೆ (Reviewer Honorarium) ರೂ 150-00 ನೀಡಲಾಗುವುದು.
- ಅಧ್ಯಾಪಕರುಗಳು ಹಾಜರಾತಿ ಪ್ರಮಾಣ ಪತ್ರ ಮತ್ತು ಬಿಲ್ಲುಗಳಲ್ಲಿ ದಿನಾಂಕಗಳು ಮತ್ತು ಮೊತ್ತವನ್ನು ತಿದ್ದಬಾರದು.
- ಯು.ಜಿ.ಸಿ ವೇತನ ರಹಿತ ಅಧ್ಯಾಪಕರುಗಳು ಸೇವಾ ಪ್ರಮಾಣ ಪತ್ರವನ್ನು ಬಿಲ್ಲಿನ ಜೊತೆಯಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
- ಸಂಭಾವನೆ ಭತ್ಯೆ, ಪ್ರಯಾಣ ಭತ್ಯೆ ಬಿಲ್ಲುಗಳಲ್ಲಿ ಮತ್ತು Work done statement ಗಳಲ್ಲಿ ಅಧ್ಯಾಪಕರುಗಳು ಕಡ್ಡಾಯವಾಗಿ ಸಹಿ ಮಾಡಿರಬೇಕು ಹಾಗೂ ಪ್ರಯಾಣ ಭತ್ಯೆ ಬಿಲ್ಲಿನಲ್ಲಿ ಬಂದಿರುವ ಮತ್ತು ಹೋಗಿರುವ ಸಮಯವನ್ನು ಮತ್ತು ಕಿಲೋಮೀಟರ್‌ಗಳನ್ನು ಕಡ್ಡಾಯವಾಗಿ ಬರೆದಿರಬೇಕು.
- ಕಸ್ಟೋಡಿಯನ್‌ರವರು ಮತ್ತು ಮಂಡಳಿ ಅಧ್ಯಕ್ಷರು ಮೌಲ್ಯಮಾಪಕರ ಹಾಜರಾತಿ ಪ್ರಮಾಣ ಪತ್ರಕ್ಕೆ ಮತ್ತು ಮೌಲ್ಯಮಾಪನ ಕಾರ್ಯದ ದಿನಚರಿ (**Work done statement**) ಬಿಲ್ಲುಗಳಿಗೆ ಮೊಹರು ಮತ್ತು ಸಹಿಯನ್ನು ಮಾಡಬೇಕು.
- ಕಡ್ಡಾಯ ಪತ್ರಿಕೆಗಳ ಮೌಲ್ಯಮಾಪನ ಬಿಲ್ಲಿನಲ್ಲಿ ಪ್ರಾಂಶುಪಾಲರ ಸಹಿ ಮತ್ತು ಮೊಹರು ಕಡ್ಡಾಯವಾಗಿ ನಮೂದಿಸಿರಬೇಕು.
- ಮೌಲ್ಯಮಾಪನ ಕಾರ್ಯಗಳ ಪ್ರಾರಂಭದಿಂದ ಮುಕ್ತಾಯದವರೆಗೆ ಒಬ್ಬರಿಗೆ ಒಂದು ಪ್ರಯಾಣ ಭತ್ಯೆಯನ್ನು ನೀಡುತ್ತಿದ್ದು, ಮೊದಲ ಒಂದು ಬಿಲ್ಲಿನಲ್ಲಿ ಮಾತ್ರ ಪ್ರಯಾಣ ಭತ್ಯೆಯನ್ನು ನಮೂದಿಸತಕ್ಕದ್ದು.

16/4

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

- ಮೌಲ್ಯಮಾಪನದ ಉತ್ತರ ಪತ್ರಿಕೆಗಳು ಕನಿಷ್ಟ 10 ಅಥವಾ 10 ಕ್ಕಿಂತ ಹೆಚ್ಚಿಗೆ ಇದ್ದರೆ ಒಂದು ದಿನದ ಭತ್ಯೆಯನ್ನು ನೀಡಲಾಗುವುದು.
- Sole valuation ಗೆ 200 ಉತ್ತರ ಪತ್ರಿಕೆಗಳಿಗಿಂತ ಕಡಿಮೆ ಇದ್ದರೆ ಮಾತ್ರ Sole valuation ಮಾಡಿಕೊಳ್ಳಬಹುದು. 200 ಉತ್ತರ ಪತ್ರಿಕೆಗಳಿಗಿಂತ ಹೆಚ್ಚಿಗೆ ಇದ್ದರೆ Board ಮಾಡಿಕೊಳ್ಳತಕ್ಕದ್ದು.
- ಪ್ರತಿ Board ನಲ್ಲಿ 04 ಜನ ಮೌಲ್ಯಮಾಪಕರು ಕಡ್ಡಾಯವಾಗಿ ಇರಬೇಕು. ಕೊನೆ Board ನಲ್ಲಿ ಮಾತ್ರ 03 ಜನ ಮೌಲ್ಯಮಾಪಕರಿಗೆ ಅವಕಾಶವಿರುತ್ತದೆ.
- Scheme of Valuation ಗೆ 08 ಜನ ಮೌಲ್ಯಮಾಪಕರಿರುವ ಪತ್ರಿಕೆಗೆ ರೂ. 100-00 ಮತ್ತು 08 ಜನ ಮೌಲ್ಯಮಾಪಕರಿಗಿಂತ ಹೆಚ್ಚಿಗೆ ಇರುವ ಪತ್ರಿಕೆಗಳಿಗೆ ರೂ. 200-00 ನೀಡಲಾಗುವುದು.
- ಅಧ್ಯಕ್ಷರು ಸ್ಕೀಮ್‌ಗಳನ್ನು ಮತ್ತು Review ಮಾಡಿದ ಪುಸ್ತಕಗಳನ್ನು ಪ್ರತ್ಯೇಕವಾಗಿ ಪಡೆದುಕೊಂಡು ಪರೀಕ್ಷಾ ವಿಭಾಗಕ್ಕೆ ಸಲ್ಲಿಸತಕ್ಕದ್ದು. (ಸ್ಕೀಮ್‌ಗಳನ್ನು ಮತ್ತು Review ಮಾಡಿದ ಪುಸ್ತಕಗಳನ್ನು ಬಿಲ್ಲಿನ ಜೊತೆಯಲ್ಲಿ ಲಗತ್ತಿಸಬಾರದು).
- ಮೌಲ್ಯಮಾಪನ ಕಾರ್ಯದ ಸಂಪೂರ್ಣ ಜವಾಬ್ದಾರಿಯನ್ನು ಮಂಡಳಿ ಅಧ್ಯಕ್ಷರು ನಿರ್ವಹಿಸಬೇಕು.
- ಮುಖ್ಯಸ್ಥರು ಮೌಲ್ಯಮಾಪನ ಕಾರ್ಯಗಳ ಸಮಯದಲ್ಲಿ ಮೌಲ್ಯಮಾಪನ ಕಾರ್ಯ ಮುಕ್ತಾಯವಾಗುವವರೆಗೂ ಹಾಜರಿರಬೇಕು.
- ಬಿಲ್ಲುಗಳನ್ನು ಕ್ರಮಬದ್ಧವಾಗಿ ಜೋಡಿಸುವುದು. (1. ಹಾಜರಾತಿ ಪ್ರಮಾಣ ಪತ್ರ 2. ಸಂಭಾವನೆ ಭತ್ಯೆ ಬಿಲ್ಲು 3. ಪ್ರಯಾಣ ಭತ್ಯೆ ಬಿಲ್ಲು 4. ಸೇವಾ ಪ್ರಮಾಣ ಪತ್ರ (ಅತಿಥಿ ಉಪನ್ಯಾಸಕರುಗಳು ಮಾತ್ರ ಸಲ್ಲಿಸತಕ್ಕದು).
- ಕೆಲವು ಮೌಲ್ಯಮಾಪಕರುಗಳು ದಿನಭತ್ಯೆ/ಸಂಭಾವನೆ ಭತ್ಯೆ ಮತ್ತು ಪ್ರಯಾಣಭತ್ಯೆಗಳನ್ನು ತಮ್ಮ ಇಚ್ಛೆಯಂತೆ ನಮೂದಿಸಿ ಸಲ್ಲಿಸಿರುತ್ತಾರೆ. ಅಂತಹ ಬಿಲ್ಲುಗಳನ್ನು ತಿರಸ್ಕರಿಸಲಾಗುವುದು.
- ಮೌಲ್ಯಮಾಪನ ಮಾಡಿದ ಎಂಟು ದಿನಗಳೊಳಗೆ ಬಿಲ್ಲುಗಳನ್ನು ಸಲ್ಲಿಸತಕ್ಕದ್ದು.
- ಪರೀಕ್ಷಾ ಮಂಡಳಿ ಅಧ್ಯಕ್ಷರು, ಮುಖ್ಯಸ್ಥರು, ಪರಿಶೀಲಕರು ಮತ್ತು ಮೌಲ್ಯಮಾಪಕರಾಗಿ ಕಾರ್ಯನಿರ್ವಹಿಸಿದಲ್ಲಿ ಮಾತ್ರ ಸಂಬಂಧಪಟ್ಟ ದಿನಭತ್ಯೆ ಮತ್ತು ಸಂಭಾವನೆ ಪಾವತಿಸಲಾಗುವುದು.
- ಸ್ನಾತಕೋತ್ತರ ಪದವಿಗಳಲ್ಲಿ ಒಂದು ದಿನಕ್ಕೆ ನಿಗಧಿಪಡಿಸುವ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಬೇಕು.

16/11/22

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

**ಪ್ರಾಯೋಗಿಕ ಪರೀಕ್ಷಾ ಕಾರ್ಯಗಳಲ್ಲಿ ಕಾರ್ಯ ನಿರ್ವಹಿಸುವ ಅಧ್ಯಾಪಕ ವರ್ಗದವರು ಈ ಕೆಳಕಂಡ ಕ್ರಮಾನುಸಾರದಂತೆಯೇ ಹಾಗೂ ವಿಶ್ವವಿದ್ಯಾನಿಲಯವು ನಿಗಧಿಪಡಿಸಿರುವ ದಿನಭತ್ಯೆ/ಸಂಭಾವನೆ ಭತ್ಯೆ, ವಿವರ**

- ಅಧ್ಯಾಪಕರುಗಳು ಕಡ್ಡಾಯವಾಗಿ ಮೊದಲ ಬಿಲ್ಲಿನಲ್ಲಿ ಮೊಬೈಲ್ ಸಂಖ್ಯೆ ಮತ್ತು ತಮ್ಮ ಬ್ಯಾಂಕಿನ ಖಾತೆ ಸಂಖ್ಯೆ ಹಾಗೂ ಐ.ಎಫ್.ಎಸ್.ಸಿ. ಕೋಡ್‌ನ್ನು ನಮೂದಿಸತಕ್ಕದ್ದು.
- ಸ್ಥಳೀಯ ಕಾಲೇಜುಗಳ ಅಧ್ಯಾಪಕರುಗಳಿಗೆ ದಿನ ಒಂದಕ್ಕೆ ರೂ. 800-00 ದಿನ ಭತ್ಯೆ ನೀಡಲಾಗುವುದು.
- ಹೊರಗಿನ ಕಾಲೇಜುಗಳ ಅಧ್ಯಾಪಕರುಗಳು ತುಮಕೂರು ನಗರ ಕಾಲೇಜುಗಳಿಗೆ ಬಂದರೆ ಮಾತ್ರ ದಿನ ಒಂದಕ್ಕೆ ರೂ. 950-00 ದಿನ ಭತ್ಯೆ ನೀಡಲಾಗುವುದು.
- ತುಮಕೂರು ನಗರ ಕಾಲೇಜುಗಳನ್ನು ಹೊರತುಪಡಿಸಿ, ಹೊರಗಿನ ಯಾವುದೇ ಕಾಲೇಜುಗಳಿಗೆ ಹೋಗಿದ್ದಲ್ಲಿ ದಿನ ಒಂದಕ್ಕೆ ರೂ. 800-00 ದಿನ ಭತ್ಯೆಯನ್ನೇ ನೀಡಲಾಗುವುದು.
- ಅತಿಥಿ ಉಪನ್ಯಾಸಕರುಗಳಿಗೆ ಮಾತ್ರ ಪ್ರಾಯೋಗಿಕ ಪರೀಕ್ಷೆಯ ಒಂದು ಅವಧಿಗೆ (Per batch) ಹತ್ತು ವಿದ್ಯಾರ್ಥಿಗಳಿಗಿಂತ ಹೆಚ್ಚಿಗೆ ಇದ್ದರೆ ಒಂದು ವಿದ್ಯಾರ್ಥಿಗೆ ರೂ. 10-00 ರಂತೆ ಹೆಚ್ಚಿಗೆ ನೀಡಲಾಗುವುದು.
- ಕಡ್ಡಾಯವಾಗಿ ಬಿಲ್ಲುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ, ದಿನಾಂಕ, ಪ್ರಾಂಶುಪಾಲರ ಸಹಿ ಮತ್ತು ಮೊಹರು ಹಾಗೂ ಅಧ್ಯಾಪಕರ ಸಹಿಯನ್ನು ನಮೂದಿಸಿರತಕ್ಕದ್ದು.
- ಯು.ಜಿ.ಸಿ. ವೇತನ ರಹಿತ ಅಧ್ಯಾಪಕರುಗಳು ಕಡ್ಡಾಯವಾಗಿ ಶೈಕ್ಷಣಿಕ ಸಾಲಿನ ಸೇವಾ ಪ್ರಮಾಣ ಪತ್ರವನ್ನು ಬಿಲ್ಲಿನ ಜೊತೆಯಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
- ಪ್ರಾಯೋಗಿಕ ಪರೀಕ್ಷೆ ಮುಗಿದ ಎಂಟು ದಿವಸಗಳೊಳಗಾಗಿ ಬಿಲ್ಲುಗಳನ್ನು ಸಲ್ಲಿಸತಕ್ಕದ್ದು.
- ಬಿಲ್ಲುಗಳನ್ನು ಕ್ರಮಬದ್ಧವಾಗಿ ಜೋಡಿಸುವುದು. (1. ಹಾಜರಾತಿ ಪ್ರಮಾಣ ಪತ್ರ 2. ಸಂಭಾವನೆ ಭತ್ಯೆ ಬಿಲ್ಲು 3. ಪ್ರಯಾಣ ಭತ್ಯೆ ಬಿಲ್ಲು 4. ಸೇವಾ ಪ್ರಮಾಣ ಪತ್ರ (ಅತಿಥಿ ಉಪನ್ಯಾಸಕರುಗಳು ಮಾತ್ರ ಸಲ್ಲಿಸತಕ್ಕದು).
- ಸಾರಿಗೆ ದರಪಟ್ಟಿಯಲ್ಲಿರುವಂತೆ ಪ್ರಸ್ತುತ ದರವನ್ನು ಪ್ರಯಾಣ ಭತ್ಯೆಯ ಬಿಲ್ಲಿನಲ್ಲಿ ನಮೂದಿಸುವುದು.

16/11/22

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಸ್ನಾತಕ / ಸ್ನಾತಕೋತ್ತರ ಪದವಿಗಳ ಪರೀಕ್ಷಾ ಕಾರ್ಯಗಳಿಗೆ ನೀಡುವ ಸಂಭಾವನೆಗಳ ವಿವರ

| ಕ್ರ.ಸಂ | ವಿವರ | ಪ್ರಸ್ತುತ ದರ | ಪರಿಷ್ಕೃತ ದರ |
|---|---|---|---|
| 1. | Valuation of each answer scripts (CBCS Scheme) | ರೂ.15-00 | ರೂ.20-00 |
| 2. | Valuation of each answer scripts (NEP Scheme) | - | ರೂ.15-00 |
| 3. | Local DA for valuation | ರೂ.650-00 | ರೂ.800-00 |
| 4. | DA for external valuation | ರೂ.800-00 | ರೂ.950-00 |

- ಜಾಗೃತದಳದ ಸದಸ್ಯರು ಬೆಳಗ್ಗೆ 6.00 ಘಂಟೆಯಿಂದ ರಾತ್ರಿ 8.00 ಘಂಟೆಯವರೆಗೆ ಕಾರ್ಯನಿರ್ವಹಿಸುವುದರಿಂದ ಮತ್ತು ವಿವಿಧ ಸ್ಥಳಗಳಲ್ಲಿರುವ ಪರೀಕ್ಷಾ ಕೇಂದ್ರಗಳಿಗೆ ಹೋಗಿ ಬರುವುದರಿಂದ ಮುಖ್ಯಸ್ಥರು ಹಾಗೂ ಉಪಮುಖ್ಯಸ್ಥರಿಗೆ ರೂ.1200=00(ಒಂದು ಸಾವಿರದ ಎರಡು ನೂರು ರೂಪಾಯಿ ಮಾತ್ರ) ಹಾಗೂ ಸದಸ್ಯರಿಗೆ ರೂ.1100=00(ಒಂದು ಸಾವಿರದ ನೂರು ರೂಪಾಯಿ ಮಾತ್ರ) ನಿಗದಿಪಡಿಸಲಾಗಿದೆ.

ಪಿ.ಹೆಚ್.ಡಿ. ಪ್ರವೇಶ ಪರೀಕ್ಷೆ ಪ್ರಿ -ಪಿ.ಹೆಚ್.ಡಿ, ಡಿ.ಎಸ್ಸಿ ಹಾಗೂ ಡಿ.ಲಿಟ್ ಪರೀಕ್ಷಾ ಕಾರ್ಯಗಳಿಗೆ ನೀಡುವ ಸಂಭಾವನೆಗಳ ವಿವರ

**2. ಪಿ.ಹೆಚ್.ಡಿ. ಪ್ರವೇಶ ಪರೀಕ್ಷೆ**

| ಕ್ರ.ಸಂ | ವಿವರ | ಪ್ರಸ್ತುತ ದರ | ಪರಿಷ್ಕೃತ ದರ |
|---|---|---|---|
| 1. | Valuation of each answer scripts (subject to minimum of Rs. 300/-) | ರೂ.15-00 | ರೂ.20-00 |
| 2. | Setting of each question paper | ರೂ.500-00 | ರೂ.600-00 |
| 3. | Local DA for valuation | ರೂ.650-00 | ರೂ.800-00 |
| 4. | DA for external valuation | ರೂ.800-00 | ರೂ.950-00 |

**3. ಪ್ರಿ -ಪಿ.ಹೆಚ್.ಡಿ, ಪರೀಕ್ಷೆ**

| ಕ್ರ.ಸಂ | ವಿವರ | ಪ್ರಸ್ತುತ ದರ | ಪರಿಷ್ಕೃತ ದರ |
|---|---|---|---|
| 1. | Valuation of each answer scripts (subject to minimum of Rs. 300/-) | ರೂ.15-00 | ರೂ.20-00 |
| 2. | Setting of each question paper | ರೂ.500-00 | ರೂ.600-00 |
| 3. | Viva-voce examination per candidate per examiner | ರೂ.100-00 | ರೂ.150-00 |
| 4. | Chairman's Honorarium | ರೂ.300-00 | ರೂ.400-00 |
| 5. | Local DA for valuation | ರೂ.650-00 | ರೂ.800-00 |
| 6. | DA for external valuation | ರೂ.800-00 | ರೂ.950-00 |

**4. ಪಿ.ಹೆಚ್.ಡಿ.ಪರೀಕ್ಷೆ.**

| ಕ್ರ.ಸಂ | ವಿವರ | ಪ್ರಸ್ತುತ ದರ | ಪರಿಷ್ಕೃತ ದರ |
|---|---|---|---|
| 1. | Valuation of Thesis Per Candidate per Examiner | ರೂ.2000-00 | ರೂ.3000-00 |
| 2. | Viva-voce per examiner | ರೂ.500-00 | ರೂ.600-00 |
| 3. | Chairman's Honorarium (Viva-voce) | ರೂ.500-00 | ರೂ.500-00 |
| 4. | Local DA for valuation | ರೂ.650-00 | ರೂ.800-00 |
| 5. | DA for external valuation | ರೂ.800-00 | ರೂ.950-00 |

**5. ಡಿ.ಎಸ್ಸಿ ಹಾಗೂ ಡಿ.ಲಿಟ್**

| ಕ್ರ.ಸಂ | ವಿವರ | ಪ್ರಸ್ತುತ ದರ | ಪರಿಷ್ಕೃತ ದರ |
|---|---|---|---|
| 1. | Valuation of Thesis Per Candidate per Examiner | ರೂ.2000-00 | ರೂ.5000-00 |
| 2. | Viva-voce per examiner | ರೂ.1500-00 | ರೂ.2000-00 |
| 3. | Chairman's Honorarium (Viva-voce) | ರೂ.500-00 | ರೂ.600-00 |
| 4. | Local DA for valuation | ರೂ.650-00 | ರೂ.800-00 |
| 5. | DA for external valuation | ರೂ.800-00 | ರೂ.950-00 |



16/4/22

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

**ಬೋಧಕೇತರ ಸಿಬ್ಬಂದಿಗಳ ಇಲಾಖಾ ಪರೀಕ್ಷೆ ಕಾರ್ಯಗಳಿಗೆ ನೀಡುವ ಸಂಭಾವನೆಗಳ ವಿವರ**

| ಕ್ರ.ಸಂ | ವಿವರ | ಪ್ರಸ್ತುತ ದರ | ಪರಿಷ್ಕೃತ ದರ |
|---|---|---|---|
| 1. | Setting of each question paper | ರೂ.5000–00 | - |
| 2. | Valuation of each answer scripts | ರೂ.25–00 | ರೂ.100–00 |
| 3. | Translation of each question paper | ರೂ.2200–00 | ರೂ.2500–00 |
| 4. | Local DA for valuation | ರೂ.650–00 | ರೂ.800–00 |
| 5. | DA for external valuation | ರೂ.800–00 | ರೂ.950–00 |
| 6. | Chief Superintendent | ರೂ.750–00 | ರೂ.850–00 |
| 7. | Deputy Superintendent | ರೂ.500–00 | ರೂ.550–00 |
| 8. | Room Invigilator | ರೂ.200–00 | ರೂ.250–00 |
| 9. | Office Staff ( FDA/SdA) | ರೂ.150–00 | ರೂ.200–00 |
| 10. | Typist | ರೂ.150–00 | ರೂ.200–00 |
| 11. | Attender/waterboy (02 Rooms Each) | ರೂ.75–00 | ರೂ.100–00 |

16/11/24

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಪ್ರಾಯೋಗಿಕ ಪರೀಕ್ಷಾ ಕಾರ್ಯ ನಿರ್ವಹಿಸುವ ಕಾಲೇಜುಗಳ /ವಿಭಾಗಗಳ ಬೋಧಕ/ ಬೋಧಕೇತರ ಸಿಬ್ಬಂದಿಗಳಿಗೆ ನೀಡುವ ಸಂಭಾವನೆಗಳ ವಿವರ (ಪ್ರತಿ ಅಧಿವೇಶನಕ್ಕೆ)

| ಕ್ರ.ಸಂ | ವಿವರ | ಪ್ರಸ್ತುತ ದರ | ಪರಿಷ್ಕೃತ ದರ |
|---|---|---|---|
| 1. | ಪರೀಕ್ಷಾ ಮುಖ್ಯ ಅಧೀಕ್ಷಕರು/ಪ್ರಾಂಶುಪಾಲರು | ರೂ.175–00 | ರೂ.250–00 |
| 2. | ನೋಡಲ್ ಅಧಿಕಾರಿಗಳು (ಯು.ಯು.ಸಿ.ಎಂ.ಎಸ್.) | – | ರೂ.200–00 |
| 3. | ಪ್ರಥಮ /ದ್ವಿತೀಯ ದರ್ಜೆ ಸಹಾಯಕರು/ಉಗ್ರಾಣ ರಕ್ಷಕರು/ತಾಂತ್ರಿಕ ಸಹಾಯಕರು (ಯಾರದರೂ ಒಬ್ಬರು) | ರೂ.100–00 | ರೂ.150–00 |
| 4. | ಬೆರಳಚ್ಚುಗಾರರು | ರೂ.100–00 | ರೂ.150–00 |
| 5. | ಪ್ರಯೋಗಾಲಯ ಸಹಾಯಕರು | ರೂ.100–00 | ರೂ.150–00 |
| 6. | ಪರಿಚಾರಕರು/ಜವಾನರು/ವಾಟರ್‌ಮನ್ | ರೂ.80–00 | ರೂ.100–00 |

## ಸೂಚನೆಗಳು:

1. ಸ್ನಾತಕ ಪದವಿಗಳಲ್ಲಿ ಒಂದು ಬ್ಯಾಚ್‌ಗೆ ಕನಿಷ್ಠ 10 ವಿದ್ಯಾರ್ಥಿಗಳು, ಕನಿಷ್ಠ ರೂ. 100-00 ಸಂಭಾವನೆ ನೀಡಲಾಗುವುದು. 10 ವಿದ್ಯಾರ್ಥಿಗಳಿಗಿಂತ ಹೆಚ್ಚಿದ್ದಲ್ಲಿ ಪ್ರತಿ ವಿದ್ಯಾರ್ಥಿಗೆ ರೂ. 10-00 ಸಂಭಾವನೆ ನೀಡಲಾಗುವುದು (ಯುಜಿಸಿಯೇತರ)
2. ಸ್ನಾತಕೋತ್ತರ ಪದವಿಗಳಲ್ಲಿ ಒಂದು ಬ್ಯಾಚ್‌ಗೆ ಕನಿಷ್ಠ 10 ವಿದ್ಯಾರ್ಥಿಗಳು, ಕನಿಷ್ಠ ರೂ. 100-00 ಸಂಭಾವನೆ ನೀಡಲಾಗುವುದು. 10 ವಿದ್ಯಾರ್ಥಿಗಳಿಗಿಂತ ಹೆಚ್ಚಿದ್ದಲ್ಲಿ ಪ್ರತಿ ವಿದ್ಯಾರ್ಥಿಗೆ ರೂ. 10-00 ಸಂಭಾವನೆ ನೀಡಲಾಗುವುದು (ಹೊರಗಿನ ಅಧ್ಯಾಪಕರುಗಳಿಗೆ ಮತ್ತು ಯುಜಿಸಿಯೇತರ)
3. ಒಬ್ಬರು ಮುಖ್ಯ ಪರೀಕ್ಷಾ ಅಧೀಕ್ಷಕರು.
4. ಪ್ರತಿ ಬ್ಯಾಚ್‌ಗೆ ಒಬ್ಬರು ಬಾಹ್ಯ ಮತ್ತು ಆಂತರಿಕ ಪರೀಕ್ಷಕರು
5. ಪ್ರತಿ ಅಧಿವೇಶನಕ್ಕೆ ಒಬ್ಬರು ಕಛೇರಿ ಅಧೀಕ್ಷಕರು,
6. ಪ್ರತಿ ಅಧಿವೇಶನಕ್ಕೆ ಒಬ್ಬರು ಬೆರಳಚ್ಚುಗಾರರು ಮತ್ತು ಒಬ್ಬರು ಪ್ರಯೋಗಾಲಯ ಸಹಾಯಕರು
7. ಪ್ರತಿ ಅಧಿವೇಶನಕ್ಕೆ ಪ್ರಥಮ / ದ್ವಿತೀಯ ದರ್ಜೆ ಸಹಾಯಕರು / ಉಗ್ರಾಣ ರಕ್ಷಕರು/ತಾಂತ್ರಿಕ ಸಹಾಯಕರು
8. ಪ್ರತಿ ಅಧಿವೇಶನಕ್ಕೆ ಒಬ್ಬರು ಪರಿಚಾರಕರು/ಜವಾನರು/ವಾಟರ್‌ಮನ್

16/11/22

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

**ಸೈದ್ಧಾಂತಿಕ ಪರೀಕ್ಷಾ ಕಾರ್ಯ ನಿರ್ವಹಿಸುವ ಕಾಲೇಜುಗಳ /ವಿಭಾಗಗಳ ಬೋಧಕ/ ಬೋಧಕೇತರ ಸಿಬ್ಬಂದಿಗಳಿಗೆ ನೀಡುವ ಸಂಭಾವನೆಗಳ ವಿವರ (ಪ್ರತಿ ಅಧಿವೇಶನಕ್ಕೆ)**

| ಕ್ರ.ಸಂ | ವಿವರ | ಪ್ರಸ್ತುತ ದರ | ಪರಿಷ್ಕೃತ ದರ |
|---|---|---|---|
| 1. | ಪರೀಕ್ಷಾ ಮುಖ್ಯ ಅಧೀಕ್ಷಕರು | ರೂ.175-00 | ರೂ.250-00 |
| 2. | ಹೆಚ್ಚುವರಿ /ಉಪ ಮುಖ್ಯ ಅಧೀಕ್ಷಕರು | ರೂ.150-00 | ರೂ.200-00 |
| 3. | ಕೊಠಡಿ ಮೇಲ್ವಿಚಾರಕರು/ಪರೀಕ್ಷಕರು | ರೂ.150-00 | ರೂ.200-00 |
| 4. | ಕಛೇರಿ ಅಧೀಕ್ಷಕರು | ರೂ.100-00 | ರೂ.150-00 |
| 5. | ಪ್ರಥಮ /ದ್ವಿತೀಯ ದರ್ಜೆ ಸಹಾಯಕರು | ರೂ.100-00 | ರೂ.150-00 |
| 6. | ಬೆರಳಚ್ಚುಗಾರರು | ರೂ.100-00 | ರೂ.150-00 |
| 7. | ಪರಿಚಾರಕರು/ಜವಾನರು/ವಾಟರ್‌ಮನ್ | ರೂ.80-00 | ರೂ.100-00 |

**ಸೂಚನೆಗಳು:**

1. ಒಂದು ಕೊಠಡಿಗೆ ಕನಿಷ್ಠ 30 ವಿದ್ಯಾರ್ಥಿಗಳು ಗರಿಷ್ಠ 40 ವಿದ್ಯಾರ್ಥಿಗಳು
2. ಒಬ್ಬರು ಮುಖ್ಯ ಪರೀಕ್ಷಾ ಅಧೀಕ್ಷಕರು.
3. ಒಬ್ಬರು ಹೆಚ್ಚುವರಿ ಮುಖ್ಯ ಅಧೀಕ್ಷಕರು.
4. ಪ್ರತಿ ಕೊಠಡಿಗೆ ಒಬ್ಬರು ಕೊಠಡಿ ಮೇಲ್ವಿಚಾರಕರು
5. 05 ಕೊಠಡಿಗಳಿಗೆ ಒಬ್ಬರು ರಿಲೀವರ್.
6. ಒಬ್ಬರು ಕಛೇರಿ ಅಧೀಕ್ಷಕರು, ಬೆರಳಚ್ಚುಗಾರರು, ಗುಮಾಸ್ತರು, (200 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿದ್ದಲ್ಲಿ ಒಬ್ಬರು ಹೆಚ್ಚುವರಿ ಗುಮಾಸ್ತರಿಗೆ ಮಾತ್ರ ಸಂಭಾವನೆ ನೀಡಲಾಗುವುದು)
7. 02 ಕೊಠಡಿಗಳಿಗೆ ಒಬ್ಬರು ಪರಿಚಾರಕರು/ಜವಾನರು/ವಾಟರ್‌ಮನ್

6/11/22

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಸ್ನಾತಕ ಶಿಕ್ಷಣ ಪರೀಕ್ಷಾ ಕಾರ್ಯ ನಿರ್ವಹಿಸಿದ (ಪ್ರಾಯೋಗಿಕ ಪರೀಕ್ಷೆಗಳು) ಕಾಲೇಜುಗಳ ಬೋಧಕ/ ಬೋಧಕೇತರ ಸಿಬ್ಬಂದಿಗಳಿಗೆ ನೀಡುವ ಸಂಭಾವನೆಗಳ ವಿವರ

| ಕ್ರ.ಸಂ | ವಿವರ | ಪ್ರಸ್ತುತ ದರ | ಪರಿಷ್ಕೃತ ದರ |
|---|---|---|---|
| 1. | ಪರೀಕ್ಷಾ ಮುಖ್ಯ ಅಧೀಕ್ಷಕರು | ರೂ.175–00 | ರೂ.250–00 |

**ಸೂಚನೆಗಳು:**

1. ಒಂದು ದಿನಕ್ಕೆ ಕನಿಷ್ಠ 05 ವಿದ್ಯಾರ್ಥಿಗಳು/ಪಾಠ ಬೋಧನೆ, ಪ್ರತಿ ವಿದ್ಯಾರ್ಥಿಗೆ /ಪಾಠ ಬೋಧನೆ ರೂ. 10-00 ಸಂಭಾವನೆ ನೀಡಲಾಗುವುದು (ಯುಜಿಸಿಯೇತರ)
2. ಒಬ್ಬರು ಮುಖ್ಯ ಪರೀಕ್ಷಾ ಅಧೀಕ್ಷಕರು.(ಬಿ.ಇಡಿ.ಕಾಲೇಜಿನ ಪ್ರಾಂಶುಪಾಲರು)
3. ಪ್ರತಿ ಬ್ಯಾಚ್‌ಗೆ ಒಬ್ಬರು ಬಾಹ್ಯ ಮತ್ತು ಆಂತರಿಕ ಪರೀಕ್ಷಕರು

18/11/22

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

**ಪರೀಕ್ಷಾ ಕಾರ್ಯ ಮತ್ತು ಕೋಡಿಂಗ್ ಹಾಗೂ ಮೌಲ್ಯಮಾಪನ ಘಟಕಗಳಲ್ಲಿ ಕಾರ್ಯನಿರ್ವಹಿಸುವ ಗುಮಾಸ್ತರು ಮತ್ತು ಸಹಾಯಕರುಗಳಿಗೆ ನೀಡುವ ಸಂಭಾವನೆಗಳ ವಿವರ.**

| ಕ್ರ.ಸಂ | ವಿವರ | ಪ್ರಸ್ತುತ ದರ | ಪರಿಷ್ಕೃತ ದರ |
|---|---|---|---|
| 1. | ಮೌಲ್ಯಮಾಪನ / ಕೋಡಿಂಗ್ ಘಟಕಗಳಲ್ಲಿ ಕಸ್ಟೋಡಿಯನ್ ರವರು ನೇಮಕಾತಿ ಮಾಡಿಕೊಂಡ ಗುಮಾಸ್ತರು ಮತ್ತು ಸಹಾಯಕರುಗಳಿಗೆ ಗರಿಷ್ಠ ಒಂದು ಪರೀಕ್ಷೆಗೆ 30 ದಿನಗಳಿಗೆ ಪಾವತಿಸುವುದು. | ರೂ. 200-00 | ರೂ. 300-00 |
| 2. | ಪರೀಕ್ಷಾ ಸಿದ್ಧತಾ ಕಾರ್ಯ, ಲೇಖನಾ ಸಾಮಾಗ್ರಿಗಳನ್ನು ಪರೀಕ್ಷಾ ಕೇಂದ್ರಗಳಿಗೆ ವಿತರಣೆ, ಉತ್ತರ ಪುಸ್ತಕಗಳನ್ನು ವಿವಿಧ ಪರೀಕ್ಷಾ ಕೇಂದ್ರಗಳಿಗೆ ವಿತರಣೆ ಮತ್ತು ಪಶ್ನೆ ಪತ್ರಿಕೆಗಳನ್ನು ಪರೀಕ್ಷಾ ಕೇಂದ್ರಗಳಿಗೆ ಒಂದು ದಿನ ಮುಂಚಿತವಾಗಿ ವಿತರಿಸಲು ಕಾಲೇಜುವಾರು/ಪರೀಕ್ಷಾ ಕೇಂದ್ರಗಳನ್ನಾಗಿ ವಿಂಗಡಿಸಿ ಹಾಗೂ ವಿವಿಧ ಪರೀಕ್ಷಾ ಕೇಂದ್ರಗಳಿಂದ ಬಂದ ಉತ್ತರ ಪತ್ರಿಕೆಗಳ ಬಂಡಲ್‌ಗಳ ಸ್ವೀಕರಿಸುವಿಕೆಗೆ ಸಂಬಂಧಿಸಿದ ಇತರೆ ಕಾರ್ಯಗಳನ್ನು ನಿಗಧಿತ ಕಛೇರಿಯ ಅವಧಿಯ ಮೊದಲು ಮತ್ತು ನಂತರವು ಹೆಚ್ಚುವರಿಯಾಗಿ ಕರ್ತವ್ಯ ನಿರ್ವಹಿಸುವ ಪರೀಕ್ಷಾ ವಿಭಾಗದ ಸಿಬ್ಬಂದಿ ವರ್ಗದವರಿಗೆ ಹೆಚ್ಚುವರಿ ಭತ್ಯೆ ಗರಿಷ್ಠ ಒಂದು ಪರೀಕ್ಷೆಗೆ 30 ದಿನಗಳಿಗೆ ಪಾವತಿಸುವುದು (ವಾರ್ಷಿಕ 02 ಪರೀಕ್ಷೆಗಳು) | ರೂ. 200-00 | ರೂ. 300-00 |

16/11/22

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಪ್ರಾಯೋಗಿಕ ಪರೀಕ್ಷೆಗಳಿಗೆ ನೀಡುವ ಸಂಭಾವನೆಗಳ ವಿವರ.

| ಕ್ರ.ಸಂ | ವಿವರ | ಪ್ರಸ್ತುತ ದರ | ಪರಿಷ್ಕೃತ ದರ |
|---|---|---|---|
| 1. | ಅರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರುಗಳಿಗೆ ಮಾತ್ರ ಪ್ರಾಯೋಗಿಕ ಪರೀಕ್ಷೆಯ ಒಂದು ಅವಧಿಗೆ (Per batch) ರೂ. 150-00 ಸಂಭಾವನೆ ಭತ್ಯೆ ನೀಡಲಾಗುವುದು. | ರೂ. 100-00 | ರೂ. 150-00 |
| 2. | ಅತಿಥಿ ಉಪನ್ಯಾಸಕರುಗಳಿಗೆ ಮಾತ್ರ ಪ್ರಾಯೋಗಿಕ ಪರೀಕ್ಷೆಯ ಒಂದು ಅವಧಿಗೆ (Per batch) ಹತ್ತಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಇದ್ದರೂ ಕೂಡ ರೂ. 150-00 ನೀಡಲಾಗುವುದು. | ರೂ. 100-00 | ರೂ. 150-00 |

ಮೌಖಿಕ ಪರೀಕ್ಷೆಗಳಿಗೆ ನೀಡುವ ಸಂಭಾವನೆಗಳ ವಿವರ.

| ಕ್ರ.ಸಂ | ವಿವರ | ಪ್ರಸ್ತುತ ದರ | ಪರಿಷ್ಕೃತ ದರ |
|---|---|---|---|
| 1. | ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳ ಮೌಖಿಕ ಸಂದರ್ಶನ (Vivo-voce) ಪ್ರತಿ ವಿದ್ಯಾರ್ಥಿಗೆ | ರೂ. 20-00 | ರೂ. 25-00 |
| 2. | ಸ್ನಾತಕೋತ್ತರ ಪದವಿ ಪರೀಕ್ಷೆಗಳ ಕಿರು ಪ್ರಬಂಧ (Dissertation) ಮೌಲ್ಯಮಾಪನಕ್ಕೆ ಭತ್ಯೆ ನೀಡಲಾಗುವುದು | ರೂ. 100-00 | ರೂ. 150-00 |

16/11/22

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಪ್ರಾಯೋಗಿಕ ಪರೀಕ್ಷೆಗಳಿಗೆ ಕಾಲೇಜು/ವಿಭಾಗದವರಿಗೆ ಸಾದಿಲ್ವಾರು ವೆಚ್ಚ ಪಾವತಿ (ಪ್ರತಿ ವಿದ್ಯಾರ್ಥಿಗೆ)

ಸ್ನಾತಕ ಪದವಿ

| ಕ್ರ.ಸಂ | ವಿವರ | ಪ್ರಸ್ತುತ ದರ | ಪರಿಷ್ಕೃತ ದರ |
|---|---|---|---|
| 1. | ಮನಃಶಾಸ್ತ್ರ ಮತ್ತು ಭೂಗೋಳಶಾಸ್ತ್ರ | 05.00 | 10.00 |
| 2. | ಭೌತಶಾಸ್ತ್ರ, ರಸಾಯನಶಾಸ್ತ್ರ, ಸಸ್ಯಶಾಸ್ತ್ರ, | 05.00 | 10.00 |
| 3. | ಪ್ರಾಣಿಶಾಸ್ತ್ರ | 06.00 | 10.00 |
| 4. | Human Subjects (Psychology etc, Per Candidate) | 25.00 | 30.00 |

ಸ್ನಾತಕೋತ್ತರ ಪದವಿ

| ಕ್ರ.ಸಂ | ವಿವರ | ಪ್ರಸ್ತುತ ದರ | ಪರಿಷ್ಕೃತ ದರ |
|---|---|---|---|
| 1. | ಮನಃಶಾಸ್ತ್ರ ಮತ್ತು ಸಂಬಂಧಿಸಿದ ಇತರೆ ವಿಷಯಗಳು., | 07.00 | 08.00 |
| 2. | ಭೌತಶಾಸ್ತ್ರ ಮತ್ತು ಸಂಬಂಧಿಸಿದ ಇತರೆ ವಿಷಯಗಳು., | 07.00 | 08.00 |
| 3. | ರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ,ಸಸ್ಯಶಾಸ್ತ್ರ ಮತ್ತು ಸಂಬಂಧಿಸಿದ ಇತರ ವಿಷಯಗಳು., | 09.00 | 10.00 |
| 4. | Human Subjects (Psychology etc, Per Candidate) | 25.00 | 30.00 |

16/11/22

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

## ಎನ್.ಇ.ಪಿ. ಯಡಿಯಲ್ಲಿ ಯು.ಯು.ಸಿ.ಎಂ.ಎಸ್. ತಂತ್ರಾಂಶದ ಮೂಲಕ ನಡೆಯಲಿರುವ ವಿವಿಧ ಸ್ನಾತಕ ಪದವಿ ಪರೀಕ್ಷೆಗಳ ಮೌಲ್ಯಮಾಪನ ಕಾರ್ಯಭಾರದ ವಿವರಗಳು

1. ಎನ್.ಇ.ಪಿ. ಯಡಿಯಲ್ಲಿ ನಡೆಯುವ ಪರೀಕ್ಷೆಗಳ ಪರೀಕ್ಷಾ ಅವಧಿಯು 3 ಗಂಟೆಯಿಂದ 2 ಗಂಟೆಗೆ ಹಾಗೂ 90 ಅಂಕಗಳಿಂದ 60 ಅಂಕಗಳಿಗೆ ಇಳಿಕೆಯಾಗಿರುವ ಹಿನ್ನಲೆಯಲ್ಲಿ, ಮೌಲ್ಯಮಾಪಕರು ಮೌಲ್ಯಮಾಪನದ ಮೊದಲ ದಿನ 20 ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವುದು ಹಾಗೂ ನಂತರದ ದಿನಗಳಲ್ಲಿ ದಿನವೊಂದಕ್ಕೆ 40 ಉತ್ತರ ಪತ್ರಿಕೆಗಳನ್ನು (ಎರಡು ಅವಧಿಗಳಿಗೆ ಅನ್ವಯವಾಗುವಂತೆ) ಮೌಲ್ಯಮಾಪನ ಮಾಡುವುದು. ಅದರನುಸಾರ ಒಂದು ದಿನದ ದಿನಭತ್ಯೆಯನ್ನು ಪಾವತಿಸಲಾಗುವುದು.

2. ಲೆಕ್ಕ ಪರಿಶೋಧಕರ ಆಕ್ಷೇಪಣೆ ಹಾಗೂ ಶಿಫಾರಸ್ಸುಗಳ ಮೇರೆಗೆ ಎನ್.ಇ.ಪಿ ಮತ್ತು ಸಿ.ಬಿ.ಸಿ.ಎಸ್ ಈ ಎರಡೂ ಮಾದರಿಯ ಪರೀಕ್ಷೆಗಳಿಗೆ ಅನ್ವಯವಾಗುವಂತೆ 2021-22 ರಿಂದಲೇ ಅನ್ವಯಿಸಿ ವಿವಿಧ ಸ್ನಾತಕ ಪದವಿ ಪರೀಕ್ಷೆಗಳ ಆಯಾ ವಿಷಯಗಳ ಪರೀಕ್ಷಾ ಮಂಡಳಿ ಅಧ್ಯಕ್ಷರು ಕಡ್ಡಾಯವಾಗಿ **ದಿನ ಒಂದಕ್ಕೆ 05 ಉತ್ತರ ಪತ್ರಿಕೆಗಳನ್ನು** (ಎರಡು ಅವಧಿಗಳಿಗೆ ಅನ್ವಯವಾಗುವಂತೆ) ಮತ್ತು ಪರಿಶೀಲಕರು(Reviewers) ಕಡ್ಡಾಯವಾಗಿ **ಪ್ರತಿ ದಿನಕ್ಕೆ 10 ಉತ್ತರ ಪತ್ರಿಕೆಗಳಿಗೆ ಕಡಿಮೆ ಇಲ್ಲದಂತೆ** (ಎರಡು ಅವಧಿಗಳನ್ನು ಸೇರಿಸಿ) Review (ಪರಿಶೀಲನೆ) ಮಾಡಬೇಕೆಂದು ತಿಳಿಸಲಾಗಿದೆ. 200 ಉತ್ತರ ಪತ್ರಿಕೆಗಳಿಗಿಂತ ಕಡಿಮೆ ಇದ್ದಲ್ಲಿ ಮಾತ್ರ ಏಕ ಮೌಲ್ಯಮಾಪಕರು (Sole Valuation) ಮಾಲ್ಯಮಾಪನ ಮಾಡುವಂತೆ ಮತ್ತು ಆ ಉತ್ತರ ಪತ್ರಿಕೆಗಳನ್ನು ಪರೀಕ್ಷಾ ಮಂಡಳಿ ಅಧ್ಯಕ್ಷರು ಪರಿಶೀಲನೆ (Review) ಮಾಡುವುದು.

16/11/22

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು